ದಿನಾಂಕಃ**12-12-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ **2** ನೇ ಎದುರುದಾರರ ಪರ ಶ್ರೀ ಎಸ್.ಆರ್.ಎಸ್.ವಕೀಲರಿಂದಃ

ನಾನು 10 ವರ್ಷಗಳಿಂದ ಅಡುಗೆ ಕಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಕೆಲವೊಂದು ಅಡುಗೆ ಕಂಟ್ರಾಕ್ಟರ್ ಅನ್ನು ಸ್ವತಂತ್ರವಾಗಿ ಮಾಡುತ್ತಿದ್ದು ಇನ್ನು ಕೆಲವು ಅಡುಗೆ ಕಂಟ್ರಾಕ್ಟರ್ ಅನ್ನು ದಯಾನಂದ್ ಎನ್ನುವವರ ಜೊತೆ ಸೇರಿಕೊಂಡು ಮಾಡುತ್ತಿದ್ದೆನು. ನಾನು ಅಡುಗೆ ಕಂಟ್ರಾಕ್ಟರ್ ಮಾಡುವ ಸಂಬಂಧ ಕಛೇರಿ ತೆರೆದಿರುವುದಿಲ್ಲ ಆದರೆ ಮನೆಯಲ್ಲಿಯೇ ಮಾಡುತ್ತೇನೆ. ಅಡುಗೆ ಕಂಟ್ರಾಕ್ಟರ್ ಕೆಲಸವು ಸೀಸನ್ ಇದ್ದಾಗ ಇರುತ್ತದೆ ಎಂದರೆ ಸರಿ. ಆ ಕಾರಣದಿಂದ ನನಗೆ ವಾರ್ಷಿಕ ಇಷ್ಟೆ ಆದಾಯ ಬರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಹೆಸರಿನಲ್ಲಿ ಬೇರೆ ಯಾವುದೇ ಕೃಷಿ ಜಮೀನು ಹಾಗೂ ಬೇರೆ ಉದ್ಯೋಗ ಇರುವುದಿಲ್ಲ.

2. ನಾನು ಬಿ ಪಿ ಎಲ್ ಪಡಿತರ ಚೀಟಿ ಹೊಂದಿರುತ್ತೇನೆ. ಬಿ ಪಿ ಎಲ್ ಪಡಿತರ ಚೀಟಿಯನ್ನು ವಾರ್ಷಿಕ ವರಮಾನ ರೂ.50,000/- ಸಾವಿರಕ್ಕಿಂತ ಕಡಿಮೆ ಇರುವ ಕುಟುಂಬಕ್ಕೆ ನೀಡುತ್ತಾರೆ ಎಂದರೆ ಸರಿ. ನಾನು ಅಡುಗೆ ಕೆಲಸವನ್ನು ಯಾರು ಮಾಡುವಂತೆ ಹೇಳುತ್ತಾರೋ ಅಲ್ಲಿಗೆ ಹೋಗಿ ಮಾಡುತ್ತೇವೆ. ನನಗೆ ಅಪಘಾತ ಆದ ನಂತರ ನಾನು ಅಡುಗೆ ಕಂಟ್ರಾಕ್ಟರ್ ಮಾಡುತ್ತಾ ಇಲ್ಲ. ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ, ನನ್ನ ಅಕ್ಕ , ನನ್ನ ಹೆಂಡತಿ ಹಾಗೂ ಒಬ್ಬ ಮಗ ಇರುತ್ತೇವೆ. ನಾನು ಅಪಘಾತ ಆದ ದಿವಸ ಹುಲುಮಕ್ಕಿಯಿಂದ ದಯಾನಂದ್ ಇವರ ಮನೆ ಇಂದಿರಾ ನಗರ ಕೊಪ್ಪಕ್ಕೆ ಬರುತ್ತಿದ್ದೆನು. ನಾನು ಆ ದಿನ ಬೈಕನ್ನು ರಸ್ತೆಯ ಮಧ್ಯ ಭಾಗದಲ್ಲಿ ಚಲಾಯಿಸಿಕೊಂಡು ಹೋಗುತ್ತಿದ್ದೆನು ಎಂದರೆ ಸಾಕ್ಷಿ ಅವರು ಎದುರಿಗೆ ಬರುತ್ತಿದ್ದನ್ನು ನೋಡಿ ರಸ್ತೆಯ ಪಕ್ಕಕ್ಕೆ ನಿಲ್ಲಿಸಿದ್ದೆ ಎಂದು ಉತ್ತರಿಸುತ್ತಾರೆ. ದೂರುನ್ನು ನನ್ನ ಹೆಂಡತಿ ಕೊಟ್ಟಿದ್ದು ಅದರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

3. ಆ ದಿನ 1 ನೇ ಎದುರುದಾರರು ಕಾರನ್ನು ನಿಧಾನವಾಗಿ ಚಲಾಯಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಅಪರಾಧ ವಿವರ ನಮೂನೆಯ ಜೊತೆ ಸ್ಕೆಚ್ ನಲ್ಲಿ ನಾನು ರಸ್ತೆಯ ಮಧ್ಯಭಾಗದಲ್ಲಿ ಬೈಕನ್ನು ನಿಲ್ಲಿಸಿಕೊಂಡಿದ್ದೆ ಎಂದರೆ ಸಾಕ್ಷಿ ನನಗೆ ಸ್ಕೆಚ್ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಭಾಗ್ಯಲಕ್ಷ್ಮಿ ಸರ್ವೀಸ್ ಸ್ಟೇಷನ್ ರಸ್ತೆ ತಿರುವಿನಿಂದ ಕೂಡಿರುತ್ತದೆ ಎಂದರೆ ಸಾಕ್ಷಿ ಸ್ವಲ್ಪ ತಿರುವಿನಿಂದ ಕೂಡಿರುತ್ತದೆ ಎಂದು ಉತ್ತರಿಸುತ್ತಾರೆ. ಟಾರ್ ರಸ್ತೆಯ ಪಕ್ಕದಲ್ಲಿ ಮಣ್ಣಿನ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಮಣ್ಣಿನ ರಸ್ತೆ ನಾಲ್ಕರಿಂದ ಐದು ಅಡಿ ಅಗಲ ಇರುತ್ತದೆ. ನಾನು ಆ ದಿನ ಬೈಕನ್ನು ಮಣ್ಣಿನ ರಸ್ತೆಯಲ್ಲಿ

ನಿಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ಸ್ಕೆಚ್ ಪ್ರಕಾರ ಅಪಘಾತ ಟಾರ್ ರಸ್ತೆಯ ಮೇಲೆ ಆಗಿರುತ್ತದೆ ಎಂದರೆ ಸರಿಯಲ್ಲ.

4. ಆ ದಿನ 1 ನೇ ಎದುರುದಾರರು ಸಾಕಷ್ಟು ಬಾರಿ ಹಾರ್ನ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವು 1 ನೇ ಎದುರುದಾರರ ತಪ್ಪಿ ನಿಂದ ಆಗಿರುವುದಿಲ್ಲ ನಾನು ನನ್ನ ತಪ್ಪಿ ನಿಂದ ಬೈಕ್ ನಿಂದ ಬಿದ್ದು ಅಪಘಾತ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ತಪ್ಪಿ ನಿಂದ ಅಪಘಾತ ಪಡಿಸಿಕೊಂಡು 1 ನೇ ಎದುರುದಾರರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗಲೂ ಸಹ ಅಡುಗೆ ಕಂಟ್ರಾಕ್ಟ್ ಕೆಲಸವನ್ನು ಮೊದಲಿನ ರೀತಿ ಮಾಡುತ್ತಾ ಇರುತ್ತೇನೆ ಎಂದರೆ ಸರಿಯಲ್ಲ.

5. ನಾನು ಅಡುಗೆ ಕಂಟ್ರಾಕ್ಟ್ ಕೆಲಸವನ್ನು ಮಾಡಿದ ನಂತರ ಹಣವನ್ನು ಹೆಚ್ಚಾಗಿ ನಗದಾಗಿ ಪಡೆದುಕೊಳ್ಳುತ್ತೇನೆ. ನಾನು ಕರ್ನಾಟಕ ಬ್ಯಾಂಕ್ ಶೃಂಗೇರಿಯಲ್ಲಿ ಖಾತೆಯನ್ನು ಹೊಂದಿರುತ್ತೇನೆ. ನಾನು ಈಗ ಪ್ರಸ್ತುತ ಕೆಲಸ ಮಾಡುತ್ತಿದ್ದು ಅದಕ್ಕೆ ಸಂಬಂಧ ಪಟ್ಟಂತೆ ಗ್ರಾಹಕರು ನನ್ನ ಖಾತೆಗೆ ಹಣ ಪಾವತಿ ಮಾಡಿದ ಬಗ್ಗೆ ನನ್ನ ಅಕೌಂಟ್ extract ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ ಸಾಕ್ಷಿ ನಾನು ಕೆಲಸ ಮಾಡುತ್ತಿಲ್ಲ ಆದರೆ ಅಕೌಂಟ್ extract ಹಾಜರುಪಡಿಸುತ್ತೇನೆ. ನಾನು ಎನ್ ಆರ್ ಪುರ ಸರ್ಕಾರಿ ಆಸ್ಪತ್ರೆ ಹಾಗೂ ಕೆ ಎಂ ಸಿ ಆಸ್ಪತ್ರೆ ಮಣಿಪಾಲ್ ನಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

6. ನಾನು ವೈದ್ಯಕೀಯ ಬಿಲ್ಲುಗಳನ್ನು ಈ ಅರ್ಜಿಗೋಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈಧ್ಯಕೀಯ ಬಿಲ್ಲು ಜೊತೆ ಔಷಧಿ ಚೀಟಿಗಳು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 5 ದಿನಗಳ ಕಾಲ ಒಳರೋಗಿಯಾಗಿ ಕೆ ಎಂ ಸಿ ಆಸ್ಪತ್ರೆ ಮಣಿಪಾಲ್ ನಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ದಿನಗಳ ಕಾಲ ಒಳರೋಗಿಯಾಗಿ ಕೆ ಎಂ ಸಿ ಆಸ್ಪತ್ರೆ ಮಣಿಪಾಲ್ ನಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದ್ವಿಚಕ್ರ ವಾಹನ ಚಲಾಯಿಸಲು ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರ ತಪ್ಪಿ ನಿಂದ ಆಪಘಾತ ಆಗದೇ ಇರುವ ಕಾರಣ 2 ನೇ ಎದುರುದಾರರ ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಲಾಯಿಸುತ್ತಿದ್ದ ಬೈಕ್‌ಗೆ ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪನಿಯ ವಿಮೆ ಚಾಲ್ತಿಯಲ್ಲಿತ್ತು. ನನ್ನ ಬೈಕ್‌ಗೆ ಆದ ನಷ್ಟ ಪರಿಹಾರ ಕೋರಿ ನಾನು ವಿಮಾ ಕಂಪನಿಯಿಂದ ಹಣ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

7. ನಾನು ಬೈಕನ್ನು ಕೊಪ್ಪದಲ್ಲಿ ರಿಪೇರಿ ಮಾಡಿಸಿದ್ದು ಆದರೆ ಗ್ಯಾರೇಜ್ ಹೆಸರು ನೆನಪಿರುವುದಿಲ್ಲ. ನಾನು ವಾಹನಾ ತಪಾಸಣಾ ವರದಿಯಲ್ಲಿ ಬೈಕ್ ಗೆ ಆದ ಜಖಂ ಹೊರತು ಪಡಿಸಿ ಬೇರೆ ವಸ್ತುಗಳನ್ನು ಹಾಕಿದ್ದ ಸಂಬಂಧ ಬಿಲ್ಲನು ಹಾಜರುಪಡಿಸಿರುತ್ತೇನೆ ಎಂದರೆ

ಸರಿಯಲ್ಲ. ಬೈಕ್‌ಗೆ ಎಷ್ಟು ಲುಕ್ಸಾ ನು ಆಗಿರುತ್ತದೆ ಎಂಬುದರ ಬಗ್ಗೆ ಯಾವುದೇ ಅಧಿಕೃತ ವರದಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಬೈಕ್ ರಿಪೇರಿ ಮಾಡಿಸುವ ಕಾಲಕ್ಕೆ ಗ್ಯಾರೇಜ್ ನವರೇ ಬೈಕ್ ಗೆ ಬೇಕಾದ ವಸ್ತುಗಳನ್ನು ಅವರೆ ತರಿಸಿರುತ್ತಾರೆ. ಸದರಿ ಗ್ಯಾರೇಜ್ ನವರು ಎಲ್ಲಿಂದು ವಸ್ತುಗಳನ್ನು ತರಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಗ್ಯಾರೇಜ್ ಯಾರಿಗೆ ಸಂಬಂಧಿಸಿದ್ದು ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ- 47 ರಲ್ಲಿ ನೀಡಿದವರ ಸಹಿ ಇರುವುದಿಲ್ಲ ಎಂದರೆ ಸರಿ. ನಾನು ಪರಿಹಾರ ಪಡೆಯುವ ಸಲುವಾಗಿ ನಿಪಿ- 47 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

8. ನಾನು ಯಾವ ಯಾವ ದಿನಾಂಕದಂದು ಮಣಿಪಾಲ್ ಗೆ ಚಿಕಿತ್ಸೆಗಾಗಿ ಹೋಗಿರುತ್ತೇನೆ ಎಂದು ಈಗ ದಿನಾಂಕ ಹೇಳಲು ನನಗೆ ನೆನಪಿರುವುದಿಲ್ಲ. ದಿನಾಂಕ 28.08.2024 ರಿಂದ ದಿನಾಂಕ 01.09.2024 ರವರೆಗೆ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ಒಂದು ವಾರದ ನಂತರ ಪುನಃ ಚಿಕಿತ್ಸೆಗೆ ಹೋಗಿರುತ್ತೇನೆ. ನಾನು ಚಿಕಿತ್ಸೆಗೆ ಬಾಡಿಗೆ ವಾಹನದಲ್ಲಿ ಹೋಗಿರುತ್ತೇನೆ. ಸದರಿ ಬಾಡಿಗೆ ವಾಹನ ರಾಜೇಶ್ ಇವರಿಗೆ ಸೇರಿದ್ದು ಇರುತ್ತದೆ. ನಾನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಟ್ರಾವೆಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮುಂದುವೆರದ ಚಿಕಿತ್ಸೆ ಹಣದ ಅವಶ್ಯಕತೆ ಇರದೇ ಇದ್ದರು ಹಣ ಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತ ಆಗುವ ಕಾಲಕ್ಕೆ 33 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿದ್ದರು ಸಹ ನಾನು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು 2 ನೇ ಎದುರುದಾರರಿಂದ ಯಾವುದೇ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 1 ಮತ್ತು 3 ನೇ ಎದುರುದಾರರ ಪರ ವಕೀಲರು 2 ನೇ ಎದುರುದಾರರ ಪರ ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ